

# ಅರಳುವ ಹೂವುಗಳೇ ಆಲಿಸಿರಿ...

**ವಿದ್ಯಾರ್ಥಿಗಳ ಆತ್ಮಹತ್ಯೆಯನ್ನು ತಪ್ಪಿಸಲು 15 ಅಂಶಗಳ ಮಾರ್ಗಸೂಚಿಯನ್ನು ರೂಪಿಸಲು ಸುಪ್ರೀಂ ಕೋರ್ಟ್ ಜುಲೈ 25, 2025 ರಂದು ನಿರ್ದೇಶನ ನೀಡಿದೆ. ಇದರಲ್ಲಿ ನೂರಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಎಲ್ಲ ಶಿಕ್ಷಣ ಸಂಸ್ಥೆಗಳು ಕೂಡ ಕನಿಷ್ಠ ಒಬ್ಬ ಮನಶಾಸ್ತ್ರಜ್ಞ, ಆಪ್ತ ಸಮಾಲೋಚಕ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯದ ಬಗ್ಗೆ ತಿಳಿವಳಿಕೆ ಹೊಂದಿರುವ ಸಮಾಜಸೇವಕರನ್ನು ಹೊಂದಿರಬೇಕು ಎಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಈಗಲಾದರೂ ನಾವು ಮಕ್ಕಳಿಗೆ ಅಗತ್ಯವಿರುವ ಆಪ್ತ ಸಮಾಲೋಚನೆ ಮತ್ತು ಮಾನಸಿಕ ಚಿಕಿತ್ಸೆಯ ತೀವ್ರ ಅಗತ್ಯವನ್ನು ಮನಗಾಣಬೇಕಾಗಿದೆ.**

■ ಡಾ. ಗಿರಿಧರ ರಾವ್ ಹವಲ್ದಾರ್

ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವುದು, ಶಿಕ್ಷಣ ಸಂಸ್ಥೆಗಳಲ್ಲಿ ಇರಬಹುದಾದ ಸಮಸ್ಯೆಗಳು, ಕೌಟುಂಬಿಕ ಕಾರಣಗಳು ಇತ್ಯಾದಿಗಳಿಗಾಗಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇವೆ. ಪರೀಕ್ಷಾ ಫಲಿತಾಂಶಗಳು ಪ್ರಕಟವಾದ ನಂತರ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಶಾಲಾ ಮಕ್ಕಳು ತಮ್ಮ ಎಲ್ಲಾ ಸಮಸ್ಯೆಗಳಿಗೂ ಆತ್ಮಹತ್ಯೆಯೇ ಪರಿಹಾರ ಎಂಬಂತೆ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ನಾವು ಗಂಭೀರವಾಗಿ ಚಿಂತಿಸಬೇಕಾದ ವಿಷಯವಾಗಿದೆ.

ವಿದ್ಯಾರ್ಥಿ ಅಥವಾ ಮಕ್ಕಳ ಆತ್ಮಹತ್ಯೆಗೆ ಅನೇಕ ಕಾರಣಗಳು ಮತ್ತು ಸ್ಪಷ್ಟವಾದ ಹಿನ್ನೆಲೆ ಇರುತ್ತವೆ. ಒಂದೇ ನಿರ್ದಿಷ್ಟ ಕಾರಣವಿರುವ ಪ್ರಕರಣ ತೀರಾ ಅಪರೂಪ. ಮಕ್ಕಳ ಆತ್ಮಹತ್ಯೆಯ ತೀರ್ಮಾನವನ್ನು ತಡೆಗಟ್ಟುವಲ್ಲಿ ಪೋಷಕರು, ಶಿಕ್ಷಣ ಸಂಸ್ಥೆಗಳು, ಸಮಾಜ ಎಲ್ಲರ ಪಾತ್ರವೂ ಇದೆ.ಎಂಬುದು ನಿರ್ವಿವಾದ. ಈ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಶಿಕ್ಷಣ ಸಂಸ್ಥೆಗಳಲ್ಲಿ ಪರಿಣಾಮಕಾರಿ ಆಪ್ತ ಸಮಾಲೋಚನೆಗೆ ಅವಕಾಶ ಕಲ್ಪಿಸಲು ತಿಳಿಸಿದೆ.

## ಮಕ್ಕಳ ದುಡುಕಿನ ತೀರ್ಮಾನ

ಇಂದು ಮನೆ ಮತ್ತು ಶಾಲೆಯಲ್ಲಿ ಮಾತ್ರವಲ್ಲದೆ, ಹೊರಗಡೆ ಕೂಡ ಮಕ್ಕಳಿಗೆ ಅಸಾಧ್ಯವಾದಂತಹ ಒತ್ತಡ ಸೃಷ್ಟಿಯಾಗುತ್ತಿದೆ. ಮಕ್ಕಳಿಗೆ ಮನೆಯಲ್ಲೂ, ಶಾಲೆಯಲ್ಲೂ ಒತ್ತಡವಿದೆ. ಹೊರಗಡೆ ಅಸುರಕ್ಷತೆ ಕಾಡುತ್ತಿದೆ. ಮಕ್ಕಳು ಎಲ್ಲಿಯೂ ಸಂತೋಷದಿಂದ ಆಟಪಾಠದಲ್ಲಿ ಮತ್ತು ಸಾರ್ವಜನಿಕವಾಗಿ ತೊಡಗಿಕೊಳ್ಳಲು ಸಾಧ್ಯವಾಗದಂತಹ ವಾತಾವರಣ ಸೃಷ್ಟಿಯಾಗಿದೆ.

ತಮ್ಮ ಬಾಲ್ಯವನ್ನು ಅನುಭವಿಸಲು, ತಮಗೆ ಅನಿಸಿದ್ದನ್ನು